ಮಾನ್ಯ ಸದಸ್ಯರು ಜಮಾ-ಖರ್ಚು ಅಲ್ಲಿ ಇಲ್ಲಿ ಹೋಗುತ್ತದೆಂದು ಹೇಳಿದರು. ಅದು ಯಾವುದಕ್ಕೂ ಅವಕಾಶ ಇಲ್ಲ. ವಸೂಲ್ಮಾಡುವುದಕ್ಕೆ ಸರ್ಕಾರ ಖಂಡಿತ ಹಿಂದೆ ಬೀಳುವುದಿಲ್ಲ. ಒಂದು ವಾರ ಕಾದು ನೋಡಬೇಕು.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:- ಮಂತ್ರಿಗಳು ಹೇಳುತ್ತಿದ್ದಾರೆ. ಆದರೆ ಇದುವರೆಗೆ ಬಾಕಿ ವಸೂಲ್ಮಾಡಲಿಲ್ಲ. ಸೆಪ್ಟೆಂಬರ್‌ನಲ್ಲಿ ಕೂಡ ಇದೇ ರೀತಿ ಹೇಳಿದರು.

ಅಧ್ಯಕ್ಷರು:- ಒಂದು ವಾರ ಕಾದು ನೋಡಿ ಎಂದು ಹೇಳಿದ್ದಾರೆ. ಅದಾದ ಮೇಲೆ ಡಿಮ್ಯಾಂಡ್ ಬಂದಾಗ ಕೇಳಿ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:- ಜನ ಏನು ಮಾತನಾಡುತ್ತಿದ್ದಾರೆಂದರೆ...

ಅಧ್ಯಕ್ಷರು:- ಪ್ರಶ್ನೆ ಕೇಳಿ, ಜನ ಮಾತನಾಡುವುದು ಬೇಡ. ಅದನ್ನೆಲ್ಲ ಹೇಳುವುದಕ್ಕೆ ಹೋದರೆ 365 ದಿನ ಕೂರಬೇಕಾಗುತ್ತದೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:- ಮಾರ್ಚ್ 31 ರೊಳಗೆ ಅವರು ಕೊಡದಿದ್ದರೆ?

ಅಧ್ಯಕ್ಷರು:- ಉಪ ಪ್ರಶ್ನೆಗೆ ಅವಕಾಶ ಇಲ್ಲ. ಫೆಬ್ರವರಿ 29 ರೊಳಗೆ ಅವರು ಬಾಕಿ ಕೊಡದೆ ಹೋದರೆ ಮಾರ್ಚ್ ಒಂದರಿಂದ ಕ್ಲಿನಿಕಲ್ ಫೆಸಿಲಿಟೀಸ್ ನಿಲ್ಲಿಸುತ್ತೇವೆ, ಭೂಕಂದಾಯ ವಸೂಲ್ಮಾಡತಕ್ಕ ರೀತಿಯಲ್ಲಿ ವಸೂಲ್ಮಾಡುತ್ತೇವೆಂದು ಹೇಳಿದ್ದಾರೆ. 8 ದಿನ ಟೈಂ ಕೇಳಿದ್ದಾರೆ. ಕೊಡತಕ್ಕದ್ದು ಯೋಗ್ಯವಾದುದು.

ಕೊರಗ ಸಮುದಾಯದ ಅಭಿವೃದ್ಧಿ ಕುರಿತು

91 (485). ಶ್ರೀ ವಸಂತ ವಿ. ಸಾಲಿಯಾನ (ಕಾಪು):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕೊರಗ ಸಮುದಾಯದ ಅಭಿವೃದ್ಧಿ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮ ಏನು ;

ಆ) ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯ್ತಿ ಮತಿಯಿಂದ ಹಣ ಬಿಡುಗಡೆ ಮಾಡಿದ್ದರೂ ಸಹ ಇದುವರೆಗೂ ಕೊರಗ ಸಮುದಾಯದ ಅಭಿವೃದ್ಧಿ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):-

ಅ) ಕೊರಗ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಗಾಗಿ ಕೆಳಕಂಡ ಶೈಕ್ಷಣಿಕ ಮತ್ತು ಆರ್ಥಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1) ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಹಾಗೂ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕೊರಗ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ಧನ ಕ್ರಮವಾಗಿ ರೂ. 100, 150, 200 ಮತ್ತು 250 ಕೊಡಲಾಗುತ್ತಿದೆ.

2) ಕೊರಗ ವಿದ್ಯಾರ್ಥಿಗಳ ಹೆತ್ತವರಿಗೆ ನಗದು ಧನಸಹಾಯ ವರ್ಷಕ್ಕೆ ರೂ. 100ರಂತೆ ನೀಡಲಾಗುತ್ತದೆ.

3) ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪ್ರಥಮ ಬಾರಿ ಶೇ.50ಕ್ಕೂ ಹೆಚ್ಚು ಅಂಕ ಪಡೆದು ಪಿಯುಸಿ ಸೇರುವ ವಿದ್ಯಾರ್ಥಿಗಳಿಗೆ ವರ್ಷಕ್ಕೆ ರೂ. 1000 ಪ್ರೋತ್ಸಾಹ ಧನ ಹಾಗೂ ವಿಶೇಷ ವಿದ್ಯಾರ್ಥಿ ವೇತನ ರೂ. 100 ರಂತೆ 10 ತಿಂಗಳಿಗೆ ನೀಡಲಾಗುತ್ತಿದೆ.

4) ಪಿಯುಸಿ ಅಂತಿಮ ಪರೀಕ್ಷೆಯಲ್ಲಿ ಪ್ರಥಮ ಬಾರಿ ಶೇ. 50 ಕ್ಕೂ ಹೆಚ್ಚು ಅಂಕ ಪಡೆದು ಡಿಗ್ರಿ ಕೋರ್ಸ್ ಸೇರುವ ಕೊರಗ ವಿದ್ಯಾರ್ಥಿಗಳಿಗೆ ವರ್ಷಕ್ಕೆ ರೂ. 1500ರಂತೆ ಪ್ರೋತ್ಸಾಹ ಧನ ಹಾಗೂ ಮಾಸಿಕ ರೂ. 150 ರಂತೆ ಹತ್ತು ತಿಂಗಳಿಗೆ ವಿಶೇಷ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ.

5) ಪಿಯುಸಿ ಅಂತಿಮ ಪರೀಕ್ಷೆಯಲ್ಲಿ ಪ್ರಥಮ ಬಾರಿ ಶೇ. 50ಕ್ಕೂ ಹೆಚ್ಚು ಅಂಕ ಪಡೆದು ವೈದ್ಯಕೀಯ ಅಥವಾ ಇಂಜಿನಿಯರಿಂಗ್‌ಗೆ ಸೇರುವ ಕೊರಗ ವಿದ್ಯಾರ್ಥಿಗಳಿಗೆ ರೂ. 3000 ಪ್ರೋತ್ಸಾಹ ಧನ ಹಾಗೂ ಮಾಸಿಕ ರೂ. 150 ರಂತೆ ಹತ್ತು ತಿಂಗಳಿಗೆ ವಿಶೇಷ ವಿದ್ಯಾರ್ಥಿವೇತನ ನೀಡಲಾಗುತ್ತಿದೆ.

6) 5 ವರ್ಷಗಳ ಹಿಂದೆ ಕಟ್ಟಿಸಿರುವ ಕೊರಗರ ಮನೆಗಳ ರಿಪೇರಿಗೆ 4.26 ಲಕ್ಷ ಖರ್ಚು ಮಾಡಲಾಗಿದೆ.

7) ಕೊರಗರಿಗೆ ಹೊಸ ಮನೆಗಳ ನಿರ್ಮಾಣಕ್ಕೆ ಮನೆಯೊಂದಕ್ಕೆ ರೂ. 10, 500 ರಂತೆ ರೂ. 8 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಕೊರಗರ ಕಾಲೋನಿಯಲ್ಲಿ 5 ಕೊಳವೆ ಬಾವಿಗಳನ್ನು ತೋಡಲಾಗಿದೆ.

ಆ) ಇಲ್ಲ

ಶ್ರೀ ವಸಂತ ವಿ. ಸಾಲಿಯಾನ :- ದಕ್ಷಿಣ ಕನ್ನಡ ಜಿಲ್ಲೆಯ ಕೊರಗ ಸಮುದಾಯದ ಅಭಿವೃದ್ಧಿ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆ. ಅದರ ಬಗ್ಗೆ ಮಂತ್ರಿಗಳು ಹಾಕಿಕೊಂಡಿರುವ ಅನೇಕ ಕಾರ್ಯಕ್ರಮಗಳ ಬಗ್ಗೆ ಉತ್ತರಿಸಿದ್ದಾರೆ. ಅದರಲ್ಲಿ ಮೊದಲನೆಯದಾಗಿ, ಪ್ರೋತ್ಸಾಹ ಧನ ಮತ್ತು ಸಹಾಯ ಧನವನ್ನು ಎಷ್ಟು ಮಂದಿ ಪ್ರಾಥಮಿಕ, ಪ್ರೌಢಶಾಲಾ ಹಾಗೂ ಪಿಯುಸಿ, ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ವಿದ್ಯಾರ್ಥಿಗಳಿಗೆ ಕೊಟ್ಟಿದ್ದೀರಿ. ಎರಡನೆಯದಾಗಿ ದಕ್ಷಿಣ ಕನ್ನಡ ಸಮಾಜದ ಎಷ್ಟು ಮನೆಗಳನ್ನು ರಿಪೇರಿ ಮಾಡಿಸಿ ಕೊಟ್ಟಿದ್ದೀರಿ? ಮೂರನೆಯದಾಗಿ, ದಕ್ಷಿಣ ಕನ್ನಡ ಜಿಲ್ಲೆಯ ಕೊರಗ ಜಿಲ್ಲೆಯ ಕೊರಗ ಸಮಾಜದ ಎಷ್ಟು ಹೊಸ ಮನೆಗಳನ್ನು ಕಟ್ಟಿಸಿಕೊಟ್ಟಿದ್ದೀರಿ? ಎಂದು ಕೇಳಿದ್ದಕ್ಕೆ ಈ ಎಲ್ಲಾ ಕಾರ್ಯಕ್ರಮಗಳ ಬಗ್ಗೆ ತಾವು ನನಗೆ ತಿಳಿಸಿದ್ದೀರಿ. ಇನ್ನೊಂದು ವಿಚಾರವೇನೆಂದರೆ, ಕೊರಗ ಸಮಾಜಕ್ಕೆ ಜಿಲ್ಲಾ ಪರಿಷತ್ತಿನಲ್ಲಿ ಮತ್ತು ಮಂಡಲ ಸಂಚಾಯ್ತಿಯಲ್ಲಿ ಪ್ರಾತಿನಿಧ್ಯ ಇಲ್ಲ. ಅದರ ಬಗ್ಗೆ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ?

ಶ್ರೀ ಬಿ. ಶಿವಣ್ಣ:- 1991-92ನೇ ಸಾಲಿನಲ್ಲಿ 15 ಲಕ್ಷ ರೂಪಾಯಿಗಳನ್ನು ಎಜುಕೇಷನ್ ಫೆಸಿಲಿಟೀಸ್ ಸಲುವಾಗಿ ಕೊರಗ ಸಮಾಜಕ್ಕೆ ಕೊಡುತ್ತಿದ್ದೇವೆ. ಇದಕ್ಕೆ ಸಂಬಂಧಪಟ್ಟ ಹಾಗೆ ಟಿಪ್ಪಣಿ ಇದೆ, ಅದನ್ನು ಸ್ವಲ್ಪ ಓದಿಬಿಡುತ್ತೇನೆ. ಕೊರಗ ಜನಾಂಗವನ್ನು ಆದಿವಾಸಿಗಳೆಂದು ಪರಿಗಣಿಸಲಾಗಿದೆ ಅವರು ಹೆಚ್ಚಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸಿಸುತ್ತಿದ್ದಾರೆ. 1981ರ ಜನಗಣತಿ ಪ್ರಕಾರ ಅವರ ಸಂಖ್ಯೆ 15807 ಆಗಿರುತ್ತದೆ. ಈ ಸಮುದಾಯದ ಸರ್ವಾಂಗೀಣ ಪ್ರಗತಿಗಾಗಿ 1985-86 ರಿಂದ ವಿಶೇಷ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಶೈಕ್ಷಣಿಕ ರಂಗದಲ್ಲಿ ವಿದ್ಯಾರ್ಥಿ ವೇತನ, ವಿಶೇಷ ಪ್ರೋತ್ಸಾಹ ಧನ, ಪಠ್ಯ ಪುಸ್ತಕ, ಬಟ್ಟೆಗಳ ವಿತರಣೆ, ಲೇಖನ ಸಾಮಗ್ರಿಗಳ ವಿತರಣೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 1985-86 ರಿಂದ ಇಮವರೆಗೆ 25 ಲಕ್ಷ ರೂಪಾಯಿಗಳನ್ನು 9733 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು ವಿನಿಯೋಗಿಸಲಾಗಿದೆ.

6 ಲಕ್ಷ ರೂಪಾಯಿಗಳನ್ನು ಪಠ್ಯ ಪುಸ್ತಕ ವಿತರಣೆ ಮತ್ತು 1,75,000 ರೂಪಾಯಿಗಳನ್ನು ಪುಸ್ತಕಗಳ ವಿತರಣೆಗೂ ನಿಯೋಜಿಸಿ 2700 ವಿದ್ಯಾರ್ಥಿಗಳಿಗೆ ಈ ಸೌಲಭ್ಯ ಕಲ್ಪಿಸಲಾಗಿದೆ. ಕೊರಗ ಜನಾಂಗದವರಿಗೆ ವಾಸದ ಮನೆಗಳನ್ನು ಕಟ್ಟಿಸಿಕೊಡಲು ಇವರಿಗೆ 41,91,000 ರೂಪಾಯಿಗಳನ್ನು ಖರ್ಚು ಮಾಡಿ 398 ಮನೆಗಳನ್ನು ನಿರ್ಮಿಸಲಾಗಿದೆ. ಹಾಗೂ 326 ಹಳೇ ಮನೆಗಳ ದುರಸ್ತಿಗಾಗಿ 4,26,000 ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. 1991-92ರಲ್ಲಿ 2000 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲು 3,02,500 ಹೆತ್ತವರಿಗೆ ವಿಶೇಷ ಧನ ಸಹಾಯಕ್ಕಾಗಿ 2 ಲಕ್ಷ, ಎಸ್.ಎಸ್.ಎಲ್.ಸಿ ಯಲ್ಲಿ ಪ್ರಥಮ ಬಾರಿಗೆ ಶೇಕಡ 50 ಅಥವ ಹೆಚ್ಚು ಅಂಕ ಪಡೆದು ಪಿ.ಯು.ಸಿ ಗೆ ಸೇರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ವಿದ್ಯಾರ್ಥಿ ವೇತನಕ್ಕಾಗಿ 10 ಸಾವಿರ ರೂಪಾಯಿ ನಿಯೋಜಿಸಲಾಗಿದೆ. ತಲಾ 1 ಸಾವಿರ ರೂಪಾಯಿ ಪ್ರೋತ್ಸಾಹ ಧನ ಮತ್ತು 1 ಸಾವಿರ ವಿಧ್ಯಾರ್ಥಿ ವೇತನ ಕೊಡಲಾಗಿದೆ. ಪಿ.ಯು.ಸಿ. ಅಂತಿಮ ಪರೀಕ್ಷೆಯಲ್ಲಿ ಪ್ರಥಮ ಬಾರಿಗೆ ಶೇಕಡ 50 ಹೆಚ್ಚು ಅಂಕ ಪಡೆದು ಡಿಗ್ರಿ ಕೋರ್ಸ್ ಸೇರುವ ಕೊರಗ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಮತ್ತು ವಿದ್ಯಾರ್ಥಿ ವೇತನಕ್ಕಾಗಿ 15 ಸಾವಿರ ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ಹಾಗೂ ಪಿ.ಯು.ಸಿ. ಅಂತಿಮ ಪರೀಕ್ಷೆಯಲ್ಲಿ ಪ್ರಥಮ ಬಾರಿಗೆ ಶೇಕಡ 50 ಅಥವಾ ಹೆಚ್ಚು ಅಂಕ ಪಡೆದ ವೈದ್ಯಕೀಯ, ಇಂಜಿನಿಯರಿಂಗ್ ಸೇರುವ ಕೊರಗ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಹಾಗೂ ವಿದ್ಯಾರ್ಥಿವೇತನಕ್ಕಾಗಿ 22,500 ಹಾಗೂ 5 ವರ್ಷದ ಹಿಂದೆ ಕಟ್ಟಿಸಿರುವ ಕೊರಗರ 50 ಮನೆಗಳಿಗೆ 1,50,000 ರೂಪಾಯಿಗಳು ಮತ್ತು 76

ಹೊಸ ಮನೆಗಳ ನಿರ್ಮಾಣಕ್ಕಾಗಿ ಒಂದು ಮನೆಗೆ 10,500ರ ಪ್ರಕಾರ 7,92,800 ರೂಪಾಯಿಗಳನ್ನು ನಿಗದಿಪಡಿಸಲಾಗಿದೆ. ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಂಬಂಧಪಟ್ಟ ಎಲ್ಲ ಅಧಿಕಾರಿಗಳು ತೀವ್ರವಾಗಿ ಶ್ರಮಿಸುತ್ತಿದ್ದಾರೆ. ಕೊರಗ ವಿದ್ಯಾರ್ಥಿಗಳನ್ನು ಹೆತ್ತವರಿಗೆ ವಿಶೇಷ ಪ್ರೋತ್ಸಾಹ ಧನ, ಮನೆಗಳ ದುರಸ್ತಿ ಮತ್ತು ನಿರ್ಮಾಣಕ್ಕಾಗಿ 9,20,000 ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ನಿಗದಿತ ಗುರಿಯನ್ನು ಮಾರ್ಚಿ 1992ರ ಅಂತ್ಯದೊಳಗೆ ಸಾಧಿಸಲು ಕ್ರಮ ಕೈಗೊಳ್ಳಲಾಗಿದೆ.

ಶ್ರೀ ವಸಂತ ವಿ. ಸಾಲಿಯಾನ :- ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಲ್ಲಿ ಅವರಿಗೆ ಪ್ರಾತಿನಿಧ್ಯ ಇಲ್ಲ ಎಂದು ಕೇಳಿದ್ದೆ, ಅದರ ಬಗ್ಗೆ ಏನಾದರೂ ಒಂದು ಕ್ರಮ ತೆಗೆದುಕೊಂಡಿದ್ದೀರಾ? ಎಲೆಕ್ಷನ್‌ನಲ್ಲಿ ಅವರಿಗೆ ಇಷ್ಟು ಸೀಟು ಎಂದು ಅಥವಾ ಸರ್ಕಾರದಿಂದ ನಾಮಿನೇಷನ್ ಮಾಡಿ ಒಂದು ಜಿಲ್ಲೆಯಲ್ಲಿ ಒಂದು ಸೀಟು ಜಿಲ್ಲಾ ಪರಿಷತ್ತಿಗೆ ಒಂದು ಸೀಟು ಮಂಡಲ ಪಂಚಾಯತಿಗೆ ಎಂದು ಮಾಡುತ್ತೀರಾ?

ಅಧ್ಯಕ್ಷರು:- ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿ ತಿದ್ದುಪಡಿ ಬರುತ್ತವೆ. ಆಗ ಈ ಸಲಹೆ ಕೊಡಿ ತಾವು. ಈಗ ರಾಮಲಿಂಗಾರೆಡ್ಡಿಯವರೆ, ತಮ್ಮ ಪ್ರಶ್ನೆ ಕೇಳಿ.

ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ

92 (498). ಶ್ರೀ ರಾಮಲಿಂಗಾರೆಡ್ಡಿ (ಜಯನಗರ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

೧) ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧಿಸುವ ಪ್ರಸ್ತಾವನೆ ಇದೆಯೇ?

೨) ಹಾಗಾದರೆ, ಸರ್ಕಾರವು ಈ ಬಗ್ಗೆ ಶಾಸನ ತರಲು ಯೋಚಿಸಿದೆಯೇ?

ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

೧) ಹೌದು.

೨) ಹೌದು. ಧೂಮಪಾನ ನಿಷೇಧದ ಶಾಸನ ತರುವ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ರಾಮಲಿಂಗಾರೆಡ್ಡಿ :- ಮಾನ್ಯ ಅಧ್ಯಕ್ಷರೇ, ಧೂಮಪಾನ ನಿಷೇಧದ ಶಾಸನ ತರುವ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ನಮ್ಮ ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ಈ ಶಾಸನದ ಅಡಿಯಲ್ಲಿ ಯಾವಯಾವ ಸಾರ್ವಜನಿಕ ಸ್ಥಳಗಳು ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಹಾಗೆಯೇ ಈಗ ಎಲ್ಲಿ ನಿಷೇಧ ಇದೆಯೋ ಅಂದರೆ ಸಿನೆಮಾ ಥಿಯೇಟರ್‌ಗಳು, ಬಸ್‌ಗಳು ಮತ್ತು ಗೌವರ್ನಮೆಂಟ್ ಆಫೀಸ್‌ನಲ್ಲಿ ಧೂಮಪಾನ ನಡೆಯುತ್ತಲೇ ಇದೆ. ಆದರ ಬಗ್ಗೆ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಸನ್ಮಾನ್ಯ ಅಧ್ಯಕ್ಷರೇ, ಶ್ರೀ ರಾಮಲಿಂಗಾರೆಡ್ಡಿ ಯವರು ಬಹಳ ಆತ್ಮಂತ ಒಳ್ಳೆಯ ಪ್ರಶ್ನೆ ಹಾಕುವ ಮೂಲಕ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಈ ತಂಬಾಕು ಸೇವನೆಯಿಂದ ಆರೋಗ್ಯಕ್ಕೆ ಬಹಳಷ್ಟು ಮಟ್ಟಿಗೆ ಹಾನಿಯಾಗುತ್ತದೆ. ಶೇಕಡ 40 ರಷ್ಟು ಕ್ಯಾನ್ಸರ್ ರೋಗಿಗಳು ಇದರಿಂದ ಆಗುತ್ತಾರೆ ಎಂಬ ಸಮೀಕ್ಷೆಯ ಹಿನ್ನೆಲೆಯಲ್ಲಿ ಭಾರತ ಸರ್ಕಾರ ರಾಜ್ಯ ಸರ್ಕಾರಕ್ಕೆ ಒಂದು ಶಿಫಾರಸ್ಸನ್ನು ಕಳುಹಿಸಿದೆ. ಧೂಮಪಾನ ನಿಷೇಧ ಕಾನೂನು ತೀವ್ರವಾಗಿ ಜಾರಿಗೆ ತರಬೇಕು ಮತ್ತು ವಿಶೇಷವಾಗಿ ಆಸ್ಪತ್ರೆಗಳಲ್ಲಿ ಇದನ್ನು ಕೂಡಲೇ ಅನುಷ್ಠಾನಕ್ಕೆ ತರಬೇಕು ಎಂಬ ಸಲಹೆ ಕೊಟ್ಟಿದ್ದರ ಮೇರೆಗೆ ಈಗಾಗಲೇ ನಮ್ಮ ನಿರ್ದೇಶಕರು ಎಲ್ಲಾ ಆಸ್ಪತ್ರೆಗಳಲ್ಲಿ ಇದನ್ನು ಕಟ್ಟುನಿಟ್ಟಾಗಿ ಮಾಡುವುದಕ್ಕೆ ಸರ್ಕ್ಯುಲರ್ ಕೊಟ್ಟಿದ್ದಾರೆ. ಮತ್ತು ಕರಡು ಮಸೂದೆ ತಯಾರು ಮಾಡಿ ಅದು ಕಾನೂನು ಇಲಾಖೆ ಮತ್ತು ಗೃಹ ಇಲಾಖೆಯ ಪರಿಶೀಲನೆಯಲ್ಲಿದೆ. ಬಹುಶಃ ಈ ಒಂದು ಅಧಿವೇಶನದಲ್ಲಿ ಅಥವಾ ಮುಂದಿನ ಅಧಿವೇಶನದಲ್ಲಿ ಈ ಬಿಲ್ ಕೂಡ ನಾವು ತರುವವರಿದ್ದೇವೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಸಾರ್ವಜನಿಕ ಸ್ಥಳಗಳು ಎಂಬ ಪದ ವ್ಯಾಪ್ತಿಗೆ ಬಹಳಷ್ಟು ಸೇರಿಸಿದ್ದಾರೆ. ಸಭೆಯ ಮುಂದೆ ಅದು ಬರುವುದರಿಂದ ಅದರ ವ್ಯಾಖ್ಯಾನ ಅನಗತ್ಯ ಎಂದು ತಿಳಿದುಕೊಂಡಿದ್ದೇನೆ.